# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Appl.**:01/2025

ಆರ್.ಡಬ್ಲ್ಯೂ-1

**<u>ದಿನಾಂಕ 12.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಎಂ.ಎಸ್.ವಿ. ವಕೀಲರಿಂದಃ**

ಅರ್ಜಿದಾರರು ದಿನಾಂಕ.01.03.2011 ರಿಂದ ದಿನಾಂಕ.13.12.2023 ರ ಅವಧಿಗೆ 100 ರಷ್ಟು ಬಾಕಿ ವೇತಕ, ಗಳಿಕೆ ರಜೆ ಮತ್ತು ಬೋನಸ್ ಪಡೆಯಲು ಅರ್ಹರಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ.10.03.2011 ರಲ್ಲಿ ಕಾರ್ಮಿಕ ಇಲಾಖೆಯಲ್ಲಿ ಹೊರಡಿಸಿದ ಪ್ರಕಟಣೆ ಜಾರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ನ್ಯಾಯಾಲಯದ ಆದೇಶವನ್ನು ನಾನು ಪಾಲನೆ ಮಾಡಿರುತ್ತೇವೆ ಎನ್ನುತ್ತಾರೆ. ಕಾರ್ಮಿಕ ನ್ಯಾಯಾಲಯದ ಆದೇಶ ಹೊರ ಬಂದ ಮೇಲೆ ನ್ಯಾಯಾಲಯದ ಆದೇಶವನ್ನು ನಾವು ಪಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕಾರ್ಮಿಕ ನ್ಯಾಯಾಲಯದ ಆದೇಶ ಜಾರಿ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿ.

ಅರ್ಜಿದಾರರು ನಮ್ಮ ಇಲಾಖೆಗೆ ಬಂದು ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡಿ ನಮಗೆ ಕೆಲಸ ಕೊಡಿ ಎಂದು ಕೇಳಿದ್ದರು ಎಂದರೆ ಸರಿ. ಇದಕ್ಕೆ ಸಂಬಂಧಪಟ್ಟಂತೆ ನಾವು ಅರ್ಜಿದಾರರಿಗೆ ಬರವಣಿಗೆಯಲ್ಲಿ ಯಾವುದೇ ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ಕಾರ್ಮಿಕ ನ್ಯಾಯಾಲಯದಲ್ಲಿ ಅರ್ಜಿದಾರರನ್ನು ಮರು ನೇಮಕ ಮಾಡಿಕೊಳ್ಳಿ ಎಂದು ಆದೇಶ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅರ್ಜಿದಾರರು ವಿ.ಆರ್.ಎಸ್.ಗೆ ಅರ್ಜಿ ಸಲ್ಲಿಸಿರುವ ಕಾರಣ ಅದನ್ನು ಪರಿಗಣಿಸಲು ಒಂದು ಅವಕಾಶವನ್ನು ನ್ಯಾಯಾಲಯ ಮಾಡಿಕೊಟ್ಟಿತ್ತು ಎನ್ನುತ್ತಾರೆ. ಅರ್ಜಿದಾರರ ವಿ.ಆರ್.ಎಸ್.ನ್ನು ಅಂಗಿಕರಿಸಿರುತ್ತೇವೆ ಎಂದು ನಮ್ಮ ಇಲಾಖೆಯಿಂದ ಅರ್ಜಿದಾರರಿಗೆ ಯಾವುದೇ ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ.

ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ಮುಂದೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸದರಿ ಪತ್ರವನ್ನು ಅಂಚೆ ಮುಖಾಂತ ಕಳುಹಿಸಿರುತ್ತೀರ ಅಥವಾ ಇ-ಮೇಲ್ ಮೂಲಕ ಕಳುಹಿಸಿರುತ್ತೀರ ಎಂದರೆ ಸಾಕ್ಷಿ ಸಧ್ಯಕ್ಕೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುತ್ತಾರೆ. ಈ ಸಂಬಂಧ ಅರ್ಜಿದಾರರಿಗೆ ನಾವು ಯಾವುದೇ ಪತ್ರ ವ್ಯವಹಾರ ಮಾಡಿಲ್ಲ, ನ್ಯಾಯಾಲಯದ ಮುಂದೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಆರ್.1ರ ಪ್ರಕಾರ ಪತ್ರವನ್ನು ಅರ್ಜಿದಾರರಿಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಸದರಿ ಪತ್ರವನ್ನು ಅರ್ಜಿದಾರರಿಗೆ ಯಾವ ರೀತಿ ಕಳುಹಿಸಿರುತ್ತೀರ ಎಂದರೆ ಸಧ್ಯಕ್ಕೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುತ್ತಾರೆ. ನಿ.ಆರ್.1 ರ ಪತ್ರವನ್ನು ಅರ್ಜಿದಾರರಿಗೆ ಕಳುಹಿಸಿಲ್ಲ ಆದರೂ ಸಹಾ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರ್ಮಿಕ ನ್ಯಾಯಾಲಯದ ಆದೇಶದ ಪ್ರಕಾರ ದಿನಾಂಕ.01.12.2010 ರವರೆಗೆ ಮಾತ್ರ ಹಿಂಬಾಕಿ ವೇತನ ಪಡೆಯಲು ಅರ್ಹರಾಗಿರುವುದಿಲ್ಲ ಎಂದರೆ ಸರಿ.

ಕಾರ್ಮಿಕ ನ್ಯಾಯಾಲಯದ ಆದೇಶ ಪ್ರಕಟಣೆ ಆದ ನಂತರ ಅಂದರೆ ದಿನಾಂಕಃ 10.03.2011 ರಿಂದ ಅರ್ಜಿದಾರರು 100 ರಷ್ಟು ಬಾಕಿ ವೇತನ ಪಡೆಯಲು ಅರ್ಹರು ಎಂದರೆ ಸರಿಯಲ್ಲ. ಅರ್ಜಿದಾರರನ್ನು ನಾವು ಡಿಸೆಂಬರ್ 2023 ರಲ್ಲಿ ಮರು ನೇಮಕಾತಿ ಮಾಡಿಕೊಂಡಿರುತ್ತೇವೆ. ದಿನಾಂಕಃ14.12.2023 ರಿಂದ 31.12.2023 ಅವಧಿಗೆ ಅರ್ಜಿದಾರರಿಗೆ ಸಂಬಳ ಕೊಟ್ಟಿರುತ್ತೇವೆ ಎಂದರೆ ಸರಿ. ಅದೇ ರೀತಿ ಜನವರಿಯಲ್ಲಿ ರೂ.74,407/-, ಫೆಬ್ರವರಿಯಲ್ಲಿ ರೂ.75,837/-, ಮಾರ್ಚ್ ನಲ್ಲಿ ರೂ.79,302/-, ಏಪ್ರಿಲ್‌ನಲ್ಲಿ ರೂ.85,835/- ವೇತನವನ್ನು ಅರ್ಜಿದಾರರಿಗೆ ನೀಡಿರುತ್ತೇವೆ ಎಂದರೆ ಸರಿ. ಅರ್ಜಿದಾರರು ನಿವೃತ್ತಿ ಹೊಂದಿದ ಮೇಲೆ ಅವರಿಗೆ ಉಪಧನವನ್ನು ಕೊಟ್ಟಿರುತ್ತೇವೆ. ಅರ್ಜಿದಾರರಿಗೆ 31 ವರ್ಷಗಳ ಉಪಧನ ನೀಡಿರುತ್ತೇವೆ ಎಂದರೆ ಸರಿ.

ದಿನಾಂಕ.01.03.2011 ರಿಂದ ದಿನಾಂಕ.13.12.2023 ಸದರಿ ಅವಧಿಗೂ ಸೇರಿ ಉಪಧನ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ gratuity ಹಣ ನೀಡಿರುವ ಬಗ್ಗೆ ದಾಖಲೆಯನ್ನು ತೋರಿಸಲಾಗಿ ಅದನ್ನು ನೋಡಿ ಸಾಕ್ಷಿ ಒಪ್ಪಿರುತ್ತಾರೆ. ಸದರಿ ದಾಖಲೆಯನ್ನು **ನಿ.ಎ.5** ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಕಲಂ.12 ರಲ್ಲಿ ಅರ್ಜಿದಾರರಿಗೆ ಯಾವ ಅವಧಿಗೆ gratuity ಹಣ ಕೊಟ್ಟಿಲ್ಲ ಎಂದು ಬರೆದಿರುತ್ತೇವೆ ಎಂದರೆ ಸರಿ. ಸದರಿ ಅವಧಿಗೆ ಕೊಟ್ಟಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2011ರಲ್ಲಿ ರೂ.2,02,010/- 2012ರಲ್ಲಿ ರೂ.2,66,222/-, 2013ರಲ್ಲಿ ರೂ.3,01,014/-, 2014ರಲ್ಲಿ ರೂ.3,66,726/- 2015ರಲ್ಲಿ ರೂ.4,12,644/- 2016ರಲ್ಲಿ ರೂ.4,52,368/- 2017 ರಲ್ಲಿ ರೂ.4,91,376/- 2018 ರಲ್ಲಿ ರೂ.5,86,995/- 2019ರಲ್ಲಿ ರೂ.6,79,590/- 2020ರಲ್ಲಿ ರೂ.7,23,336/- 2021ರಲ್ಲಿ ರೂ.8,11,146/- 2022 ರಲ್ಲಿ ರೂ.8,72,130/- 2023ರಲ್ಲಿ ರೂ.9,22,997/- ಸದರಿ ಅವಧಿಯ ಒಟ್ಟು ಬಾಕಿ ವೇತನದ ಮೊತ್ತ ರೂ.70,87,158/- ಇರುತ್ತದೆ ಎಂದರೆ ಸರಿಯಲ್ಲ. ಕೊನೆ ತಿಂಗಳ Basic Pay ರೂ.46,896/- ಎಂದರೆ ಸರಿ.

ದಿನಾಂಕ.01.03.2011 ರಿಂದ 13.12.2023 ರ ಅವಧಿಯಲ್ಲಿ ಅರ್ಜಿದಾರರ ಮೂಲ ವೇತನದ ಕ್ರೋಡೀಕರಿಸಿದ ಮೊತ್ತ ರೂ.46,896/- ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ.01.03.2011 ರಿಂದ 13.12.2023 ರ ಅವಧಿಯಲ್ಲಿ ಅರ್ಜಿದಾರರ Dearness Allowance ಮೊತ್ತ ರೂ.19,391/- ಆಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಒಟ್ಟು ಬಾಕಿ ವೇತನವನ್ನು 70,87,158/- ಕೊಡಬೇಕಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಳಿಕೆ ರಜೆ 1 ವರ್ಷದಲ್ಲಿ 12 ಇರುತ್ತದೆ ಎಂದರೆ ಸರಿಯಲ್ಲ. ಗಳಿಕೆ ರಜೆ ಪ್ರತಿ 20 ದಿವಸಕ್ಕೆ ಒಂದು ಗಳಿಸಬೇಕಾಗಿರುತ್ತದೆ.

ಒಬ್ಬ ಕಾರ್ಮಿಕ 240 ದಿವಸ ಕೆಲಸ ಮಾಡಿದರೆ 12 ಗಳಿಕೆ ರಜೆ ಬರುತ್ತದೆ. ಸದರಿ ಅವಧಿಗೆ ಎಂದರೆ ದಿನಾಂಕ.01.03.2011 ರಿಂದ 13.12.2023 ರ ಅವಧಿಯಲ್ಲಿ ಒಟ್ಟು 132 ಗಳಿಕೆ ರಜೆ ಬರುತ್ತದೆ ಎಂದರೆ ಸರಿಯಲ್ಲ.

2006 ರಿಂದ 2010 ರ ಅವಧಿಗೆ ಒಟ್ಟು 168 ಗಳಿಕೆ ರಜೆ ಆಗಿತ್ತದೆ ಎಂದರೆ ಸರಿಯಲ್ಲ. ಕೊನೆ ತಿಂಗಳ ಒಂದು ದಿನದ ವೇತನ ರೂ.3,084/- ಆಗಿತ್ತದೆ ಎಂದರೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಅರ್ಜಿದಾರರಿಗೆ ಗಳಿಕೆ ರಜೆ ಮೊತ್ತ ರೂ.5,34,912/- ಕೊಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅವಧಿಗೆ ಅಂದರೆ ದಿನಾಂಕ.01.03.2011 ರಿಂದ 13.12.2023 ರ ಅವಧಿಗೆ ರೂ.1,37,266/- ಬೋನಸ್ ಹಣ ಕೊಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ.01.03.2011 ರಿಂದ 13.12.2023 ರ ಅವಧಿಗೆ ಅರ್ಜಿದಾರರು 100 ರಷ್ಟು ಬಾಕಿ ವೇತನ, ಗಳಿಕೆ ರಜೆ ಮತ್ತು ಬೋನಸ್ ಪಡೆಯಲು ಅರ್ಹರಿರುತ್ತಾರೆ ಎಂದರೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**